**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ.**

**ಸಿ.ಸಿ. ನಂ. 921/2020** **ಫ್ರಾ.ಸಾ –2**
**ಚಾ.ಸಾ – 7**

**ದಿನಾಂಕಃ 23.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಭಾಗ್ಯ |
| ಗಂಡನ ಹೆಸರು | : | ಸಿದ್ದಪ್ಪ ಹೆಚ್ ಎ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ಅಬಕಾರಿ ನಿರೀಕ್ಷಕರು |
| ವಾಸ ಸ್ಥಳ | : | ಮೈಸೂರು |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ದಿ. **22.07.2019** ರಿಂದ **31.01.2025** ರ ತನಕ ವಿರಾಜಪೇಟೆ ವಲಯ ಕಚೇರಿಯಲ್ಲಿ ಅಬಕಾರಿ ನಿರೀಕ್ಷಕರು ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. **28.04.2020** ರಂದು ನಾನು ಸಹ ಸಿಬ್ಬಂದಿಯೊಂದಿಗೆ ಇಲಾಖಾ ವಾಹನದಲ್ಲಿ ತಿತಿಮತಿ ಮುಖ್ಯ ರಸ್ತೆಯಲ್ಲಿ ಸಂಜೆ **06.45** ರಲ್ಲಿ ಗಸ್ತು ಮಾಡುತ್ತಿರುವಾಗ ಅರಣ್ಯ ವೀಕ್ಷಕರಾದ ಚಾಸಾ **2** ರವರಿಂದ ಬಂದ ಮಾಹಿತಿ ಏನೆಂದರೆ ದೂರವಾಣಿ ಕರೆ ಮಾಡಿ ತಿತಿಮತಿ ಕಾಡಿನೊಳ್ಳಗೆ ಇಬ್ಬರು ವ್ಯಕ್ತಿಗಳು ಬ್ಯಾಗಿನಲ್ಲಿ ಕಳ್ಳಬಟ್ಟಿ ಸಾಗಣೆ ಮಾಡುತ್ತಿರುವಾದಾಗಿ ತಿಸಿರುತ್ತಾರೆ. ನಾವು ಅವರನ್ನು ತಿತಿಮತಿ ಮುಖ್ಯ ರಸ್ತೆ ಬಳಿ ಕಾಯುತ್ತಿದ್ದೆವು. ಕಾಡಿನೊಳಗಿನಿಂದ ಆರೋಪಿಗಳು ಬರುವುದನ್ನು ಗಮನಿಸಿ ಅವರನ್ನು ಹಿಡಿದು ಅವರ ಹೆಸರು ವಿಳಾಸ ಕೇಳಿದೆವು. ಅವರ ಹೆಸರುಗಳು ದೋಷರೋಪಣಾಪಟ್ಟಿಯಲ್ಲಿರುವಂತೆ ತಿಳಿಸಿರುತ್ತಾರೆ. ಶೋಧನಾ ವಾರೆಂಟ್

ಪಡೆಯಲು ನ್ಯಾಯಾಲಯದ ಅನುಮತಿ ಕಾಲವಕಾಶ ಇಲ್ಲದಿರುದರಿಂದ ಸ್ಥಳದಲ್ಲಿ ಶೋಧನಾ ವಾರೆಂಟ್ ತಯಾರಿಸಿ ಸಿಬ್ಬಂದಿಯವರಿಂದ ಅಂಗಶೋದನೆ ಮಾಡಲಾಾಯಿತು. ನಂತರ ಆರೋಪಿ 1 ರವರ ಬಳಿ ಇದ್ದ ವೈಟ್ ಬಳಿ ಬ್ಯಾಗಿನಲ್ಲಿ 5 ಲೀ ಪ್ಲಾಸ್ಟಿಕ್ ಕ್ಯಾನ್ ಇರುವುದು ಕಂಡು ಬಂದಿದ್ದು ಬಿಳಿ ಬಣ್ಣದ ಘಾಟ್ ವಾಸನೆಯುಳ್ಳ ದ್ರವ ಕಂಡು ಬಂದಿರುತ್ತದೆ. ಅದನ್ನು ಸದರಿಯವರ ಬಳಿ ಕೇಳಲಾಗಿ ಕಳ್ಳಬಟ್ಟಿ ಇರುವುದಾಗಿ ತಿಳಿಸಿರುತ್ತಾರೆ. ಇದನ್ನು ಕೇಳಲಾಗಿ ಮಾರಾಟ ಮಾಡುವ ಉದ್ದೇಶದಿಂದ ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ. ಸದರಿಯವರಿಂದ ಅದನ್ನು ವಶಪಡಿಸಿಕೊಂಡು ಪಂಚಾರಾದ ಚಾಸಾ 1, 2, 4 ಮತ್ತು 5 ರವರ ಸಮಕ್ಷಮ ಪರಿಶೀಲಿಸಿದಾಗ ಸುಮಾರು 4 ಲೀ ಕಳ್ಳಬಟ್ಟಿ ಇರುವುದು ಕಂಡು ಬಂತು. ಇದರಿಂದ 180 ಮೀ ಲಿಯಷ್ಟು ಕಳ್ಳಬಟ್ಟಿ ತೆಗದುಕೊಂಡು ಮಾದರಿ ಪರೀಕ್ಷೆಗಾಗಿ ಬಿಳಿ ಬಟ್ಟೆಯಿಂದ ಸುತ್ತಿ ಇಲಾಖಾಸೀಲು ಮಾಡಲಾಯಿತು. ನಂತರ ಸಂಜೆ 07.30 ರಿಂದ 09.00 ಗಂಟೆ ತನಕ ವಾಹನದ ಹೈಡ್ ಲೈಟ್ ಮೂಲಕ ಮಹಜರ್ ಕ್ರಮ ಜರುಗಿಸಿ ಮುಂದಿನ ಕ್ರಮಕ್ಕಾಗಿ ಠಾಣೆಗೆ ಬಂದು ಪ್ರ.ಥ.ವರದಿ ತಯಾರಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಯಿತು. ನಂತರ ಮುಂದಿನ ತನಿಖೆಗಾಗಿ ಚಾಸಾ 9 ರವರಿಗೆ ಕಡತವನ್ನು ವರ್ಗಾಯಿಸಲಾಯಿತು.

ನಿ. ಪಿ. 1 ಮಹಜರ್ ನಲ್ಲಿ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ. ಪಿ. 1(ಬಿ)ಎಂದು ಎಂದು ಗುರುತಿಸಲಾಯಿತು. ಸಾಕ್ಷಿಯು ಇಬ್ಬರನ್ನು ಶೋಧಿಸಲು 2 ಶೋದನಾ ವಾರೆಂಟ್ ಅನ್ನು ತಯಾರಿಸಿದ್ದು ಅವುಗಳನ್ನು ನೋಡಿ ಗುರುತಿಸಿದ್ದು ನಿ. ಪಿ. 4 ಮತ್ತು 5 ಎಂದು ಸಹಿಗಳನ್ನು ನಿ. ಪಿ 4(ಎ) ಮತ್ತು 5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ಥ ವರದಿಯನ್ನು ನೋಡಿ ಗುರುತಿಸಿದ್ದು ನಿ. ಪಿ. 6 ಎಂದು ಸಹಿಯನ್ನು ನಿ.

ಪಿ 6(ಎ) ಎಂದು ಗುರುತಿಸಲಾಯಿತು. ನಿ. ಪಿ. 2 ಮತ್ತು 3 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಮು. ಮಾ 1 ರಿಂದ 3 ಮತ್ತು ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಡಿ. ಆರ್. ಜೆ. ವಕೀಲರಿಂದಃ

ನಾನೇ ಪ್ರ.ವ.ವರದಿ ತಯಾರಿಸಿರುತ್ತೇನೆ ಮತ್ತೆ ನಾನೇ ದೂರು ಕೊಟ್ಟಿರುತ್ತೇನೆ ಎಂದರೆ ಸರಿ. ಚಾಸಾ 1 ರವರು ಮಾಹಿತಿ ಆಧಾರ ದೂರು ದಾಖಲಿಸಿರುತ್ತೇನೆ. ಆಯಿರಾಸುಳಿ ಸ್ಥಳ ಕಾಡು ಪ್ರದೇಶ ಅಲ್ಲಿ ಮನೆಗಳಿವೆ ಎಂದರೆ ಸರಿ. ಮುಖ್ಯ ರಸ್ತೆಯಲ್ಲಿ ಆರೋಪಿಗಳು ಸಿಕ್ಕಿ ಬಿದ್ದಿರುತ್ತಾರೆ. ಮುಖ್ಯ ರಸ್ತೆಯಲ್ಲಿವಾಹನಗಳು ಸಂಚಾರ ಇದೆ ಎಂದರೆ ಸರಿ. ಆರೋಪಿಗಳು ಸಿಕ್ಕಿದಾಗ ಸಾರ್ವಜನಿಕರು ಇರಲಿಲ್ಲ. ಮುಖ್ಯ ರಸ್ತೆಯಲ್ಲಿ ಅರುಣ್ ಮಾಚಯ್ಯ ಮತ್ತು ಸ್ವಾಮಿಯವರ ಕಾಫಿ ತೋಟ ಇದೆ ಎಂದರೆ ಇರಬಹುದು. ಮು. ಮಾ 2 ಕ್ಯಾನ್ ಅಡಿಗೆ ಎಣ್ಣೆ ಕ್ಯಾನ್ ಆಗಿರಬಹುದು. ಉಳಿದ ಮು ಮಾ ಗಳು ಸಹಜವಾಗಿ ಸಿಗುವ ವಸ್ತುಗಳು ಎಂದರೆ ಸರಿ. ಕೇವಲ ಅರಣ್ಯ ಮತ್ತು ಅಬಕಾರಿ ಇಲಾಖೆಯವರು ಮಾತ್ರ ಸಾಕ್ಷಿದಾರರು ಎಂದರೆ ಸರಿ. ಆರೋಪಿಗಳ ವಶದಿಂದ ಕಳ್ಳಬಟ್ಟಿ ಸಾರಾಯಿ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದ ದಾಖಲೆಗಳು ಸೃಷ್ಟಿತ ದಾಖಲೆಗಳು ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ಆರೋಪಿಗಳಿಂದ ಮುಖ್ಯ ರಸ್ತೆಯಲ್ಲಿ ಮು. ಮಾ 1 ರಿಂದ 3 ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿ. ಪಿ. 1 ಮಹಜರ್ ಅನ್ನು ಸ್ಥಳದಲ್ಲಿ ತಯಾರಿಸಲಾಗಿದೆ ಎಂದರೆ ಸರಿಯಲ್ಲ. ನಿ. ಪಿ. 2 ಮತ್ತು 3 ಸ್ಥಳದಲ್ಲಿ ತೆಗೆದಿಲ್ಲ ಎಂದರೆ ಸರಿಯಲ್ಲ. ಅಂಕಿ ಅಂಶಗಳಿಗೆ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**CC. No. 921/2020** **PW - 7**

ಮರು ವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ